# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ**

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.**

**ವಿಷಯ:** ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:**

1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಸ್ಪೇ) 04 ಪಿಇಟಿ 2005 ದಿನಾಂಕ:31.03.2006.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007.
3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 03 ಸೇನಿಸೇ 2010 ದಿನಾಂಕ:12.10.2010.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:29.08.2011.
5. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಸ್ಪೇ) 203 ಪಿಇಎನ್ 2012(ಪಿ) ದಿನಾಂಕ:18.05.2016.
6. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018 ದಿನಾಂಕ:23.06.2018
7. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2018-19 ದಿನಾಂಕ:19.07.2019.
8. ದಿನಾಂಕ:09.09.2020 ರಂದು ನಡೆದ ಕವಿಪ್ರನಿನಿಯ 121ನೇ ನಿರ್ದೇಶಕರ ಮಂಡಳಿ ಸಭೆಯ ನಿರ್ಣಯ ಸಂಖ್ಯೆ:121/14.
9. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ರವರ ಅಂತರ ಕಛೇರಿ ಟಿಪ್ಪಣಿ ಸಂಖ್ಯೆ: ಕವಿಪ್ರನಿನಿ/ಬಿ37/121ಬಿಎಮ್/2020-21/499-508 ದಿನಾಂಕ:20.10.2020.

*****

**ಪ್ರಸ್ತಾವನೆ:-**

ದಿನಾಂಕ:01.04.2006 ರಂದು ಅಥವಾ ತರುವಾಯ ಸರ್ಕಾರಿ ಸೇವೆಗೆ ಸೇರುವ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು, ದಿನಾಂಕ:31.03.2006ರ ಆದೇಶದಲ್ಲಿ ಕರ್ನಾಟಕ ಸರ್ಕಾರವು ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ, ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007 ರಲ್ಲಿ ಕವಿಪ್ರನಿನಿ/ಎಲ್ಲಾ ವಿಸಕಂಗಳಲ್ಲಿ ದಿನಾಂಕ:01.04.2006 ರಂದು ಅಥವಾ ನಂತರ ಸೇವೆಗೆ ಸೇರಿರುವ/ಸೇರುವ ಎಲ್ಲಾ ಅಧಿಕಾರಿ/ನೌಕರರಿಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ, ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸದರಿ ಯೋಜನೆಯ ಆದೇಶಗಳನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.

ದಿನಾಂಕ:12.10.2010ರ ಕರ್ನಾಟಕ ಸರ್ಕಾರದ ಇಡಿಗಂಟು ಪರಿಹಾರದ ಆದೇಶವನ್ನು, ನಿಗಮವು ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ29.08.2011ರಲ್ಲಿ ಸೇವೆಯಲ್ಲಿರುವಾಗಲೇ ಮೃತರಾದ ಅಧಿಕಾರಿ/ನೌಕರರ ಕುಟುಂಬದವರಿಗೆ ಇಡಿಗಂಟು ಪರಿಹಾರ ಪಾವತಿಗೆ ಸಂಬಂಧಿಸಿದಂತೆ ನಿಗಮದಲ್ಲಿಯೂ ಅಳವಡಿಸಿಕೊಳ್ಳಲಾಗಿದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಸ್ಪೆಷಲ್) 203 ಪಿಇಎನ್ 2012(ಪಿ), ದಿನಾಂಕ:18.05.2016 ಅನ್ನು ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/

2018–19 ದಿನಾಂಕ:19.07.2019ರಲ್ಲಿ ಅಳವಡಿಸಿಕೊಳ್ಳಲಾಗಿದೆ. ಸದರಿ ಆದೇಶದಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ನೌಕರರು **ವಯೋ ನಿವೃತ್ತಿ ಹೊಂದಿದಾಗ, ನಿವೃತ್ತಿಗೂ ಮೊದಲು ಈ ಯೋಜನೆಯಿಂದ ಹೊರಹೋಗ ಬಯಸಿದಾಗ ಮತ್ತು ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ,** ಪಿಂಚಣಿ ಕೊಡುಗೆಯ ಸಂಚಿತ ನಿಧಿ ಮತ್ತು ಆನ್ಯುಟಿಯ (Annuity) ಸಂಚಿತ ಪಿಂಚಣಿ ಪಾವತಿಯನ್ನು ಯಾರಿಗೆ ಮತ್ತು ಯಾವ ಅನುಕ್ರಮದಲ್ಲಿ ಪ್ರಧಾನ ಮಾಡಬೇಕೆಂದು ತಿಳಿಸಲಾಗಿರುತ್ತದೆ.

ತದನಂತರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018 ದಿನಾಂಕ:23.06.2018ರಲ್ಲಿ, ದಿನಾಂಕ:01.04.2018 ರಂದು/ನಂತರ ನಿವೃತ್ತಿ ಹೊಂದಿದ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ ಹಾಗೂ ದಿನಾಂಕ 01.04.2018 ರಂದು/ನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ನೌಕರರ ಕುಟುಂಬಕ್ಕೆ ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯವನ್ನು ಕೆಲವು ಷರತ್ತುಗಳಿಗೆ ಒಳಪಡಿಸಿ ವಿಸ್ತರಿಸಿದೆ. ಸರ್ಕಾರದ ಸದರಿ ಆದೇಶದನ್ವಯ, ದಿನಾಂಕ:31.03.2018ರ ಪೂರ್ವದಲ್ಲಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೌಕರರ ಅವಲಂಬಿತರಿಗೆ ಇಡಿಗಂಟು ಪರಿಹಾರದ ಸೌಲಭ್ಯವು ಅನ್ವಯಿಸಲಿದ್ದು, ದಿನಾಂಕ:01.04.2018 ರಂದು/ನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಪ್ರಕರಣಗಳಿಗೆ ಇಡಿಗಂಟು ಸೌಲಭ್ಯವು ಅನ್ವಯವಾಗುವುದಿಲ್ಲವೆಂದು ಸಹ ತಿಳಿಸಲಾಗಿದೆ ಹಾಗೂ ದಿನಾಂಕ:01.04.2018 ರಂದು/ನಂತರ ಮರಣ ಹೊಂದಿದ ನೌಕರರ ಅವಲಂಬಿತರು ಆಯ್ಕೆ ಮಾಡಿಕೊಂಡಲ್ಲಿ, ನೌಕರರ ಪಿಂಚಣಿ ನಿಧಿಯಲ್ಲಿ ಕ್ರೋಢೀಕೃತವಾದ ಮೊತ್ತವನ್ನು ಸರ್ಕಾರವು ಹಿಂಪಡೆಯುವ ಷರತ್ತಿಗೊಳಪಟ್ಟು, ಕರ್ನಾಟಕ ಸರ್ಕಾರ ನೌಕರರ (ಕುಟುಂಬ ಪಿಂಚಣಿ) ನಿಯಮಗಳು, 2002ರನ್ವಯ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಿರುತ್ತದೆ.

ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿಸುತ್ತಿರುವ ಶೇಕಡ 14ರ ಮಾಸಿಕ ಪಿಂಚಣಿ ವಂತಿಗೆಯೊಂದಿಗೆ (ವೇತನ ಮತ್ತು ಡಿಎ) ನಿವೃತ್ತಿ/ಮರಣ ಉಪದಾನ ಮತ್ತು ಕುಟುಂಬ ಪಿಂಚಣಿಯ (ಮರಣ ಹೊಂದಿದ ನೌಕರರ ಅವಲಂಬಿತರು ಆಯ್ಕೆ ಮಾಡಿಕೊಂಡಲ್ಲಿ) ಪಾವತಿಯು ಹೆಚ್ಚುವರಿ ಹೊರೆಯಾಗುವುದರಿಂದ, ನಿಗಮವು ಕರ್ನಾಟಕ ಸರ್ಕಾರದಿಂದ ಹೊರಡಿಸುವ ಮಾರ್ಗಸೂಚಿಗಳ ನಿರೀಕ್ಷೆಯಲ್ಲಿರುತ್ತದೆ.

ಮೇಲೆ ಓದಲಾದ ಉಲ್ಲೇಖ(6)ರ ಸರ್ಕಾರದ ಆದೇಶದಲ್ಲಿರುವಂತೆ ನೂತನ ಪಿಂಚಣಿ ಯೋಜನೆಗೆ ಒಳಪಡುವ ನಿಗಮ/ಎಸ್ಕಾಂಗಳ ನೌಕರರಿಗೆ/ನೌಕರರ ಅವಲಂಬಿತರಿಗೆ ನಿವೃತ್ತಿ/ಮರಣ ಉಪದಾನ ಸೌಲಭ್ಯವನ್ನು ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡುವ ನಿಗಮ/ಎಸ್ಕಾಂಗಳ ನೌಕರರಿಗೆ ವಿಸ್ತರಿಸಿರುವ ರೀತಿಯಲ್ಲಿಯೇ ವಿಸ್ತರಿಸುವಂತೆ ಮತ್ತು ಸೇವೆಯಲ್ಲಿರುವಾಗಲೇ ನಿಧನರಾಗುವ ನೌಕರರ ಅವಲಂಬಿತ ಕುಟುಂಬಕ್ಕೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಪರಿಗಣಿಸುವಂತೆ ದಿನಾಂಕ:09.09.2020 ರಂದು ನಡೆದ 121ನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ನಿಗಮವು ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/2020–21 ದಿನಾಂಕ:** 25 NOV 2020

ದಿನಾಂಕ:01.04.2006 ರಂದು ಮತ್ತು ನಂತರ ನಿಗಮ/ವಿಸಕಂಗಳ ಸೇವೆಗೆ ಸೇರಿದ/ಸೇರುವ ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ನೌಕರರಿಗೆ ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ನಿವೃತ್ತಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ:

1. **<u>ನಿವೃತ್ತಿ ಉಪದಾನ:</u>**
   ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬರುವ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರಿಗೆ ವಿಸ್ತರಿಸಿರುವ ರೀತಿಯಲ್ಲಿಯೇ ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ನಿವೃತ್ತರಾಗುವ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರಿಗೂ **ದಿನಾಂಕ:01.04.2018ರಿಂದ** ಜಾರಿಗೆ

ಬರುವಂತೆ ಅನ್ವಯಿಸಿ ನಿವೃತ್ತಿ ಉಪದಾನ ಸೌಲಭ್ಯವನ್ನು ವಿಸ್ತರಿಸಲಾಗಿದೆ ಹಾಗೂ ನಿವೃತ್ತಿ ಉಪದಾನದ ಮೊತ್ತವು ಗರಿಷ್ಠ ಮಿತಿ ರೂ.20.00ಲಕ್ಷ ಗಳಿಗೊಳಪಟ್ಟಿರುತ್ತದೆ.

2. <u>ಮರಣ ಉಪದಾನ:</u>

2.1 ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡುವ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರ ಅವಲಂಬಿತ ಕುಟುಂಬಕ್ಕೆ ವಿಸ್ತರಿಸಿರುವ ರೀತಿಯಲ್ಲಿಯೇ, ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಟ್ಟಿದ್ದು, ಸೇವೆಯಲ್ಲಿರುವಾಗಲೇ ಮರಣ ಹೊಂದುವ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರ ಅವಲಂಬಿತ ಕುಟುಂಬಕ್ಕೆ **ದಿನಾಂಕ:01.04.2018** ರಿಂದ ಜಾರಿಗೆ ಬರುವಂತೆ ಅನ್ವಯಿಸಿ ಮರಣ ಉಪದಾನ ಸೌಲಭ್ಯವನ್ನು ವಿಸ್ತರಿಸಲಾಗಿದೆ ಹಾಗೂ ಮರಣ ಉಪದಾನದ ಮೊತ್ತವು ಗರಿಷ್ಠ ಮಿತಿ ರೂ.20.00ಲಕ್ಷಗಳಿಗೊಳಪಟ್ಟಿರುತ್ತದೆ.

2.2 **ದಿನಾಂಕ:31.03.2018ರ** ಪೂರ್ವದಲ್ಲಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರಿಗೆ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ29.08.2011ರನ್ವಯ ಈಗಾಗಲೇ ನೀಡಿರುವ **ಇಡಿಗಂಟಿನ ಪರಿಹಾರದ ಸೌಲಭ್ಯವು ಅನ್ವಯವಾಗಲಿದ್ದು,** ಅದನ್ನು ಪುನರ್ ಪರಿಷ್ಕರಿಸತಕ್ಕದ್ದಲ್ಲ.

**2.3** ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ ಒಳಪಟ್ಟಿದ್ದು ಸೇವೆಯಲ್ಲಿರುವಾಗಲೇ ನಿಧನ ಹೊಂದುವ ಅಂತಹ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರ ಅವಲಂಬಿತ ಕುಟುಂಬಕ್ಕೆ ಮರಣ ಉಪದಾನದ ಸೌಲಭ್ಯವನ್ನು **ಸರ್ಕಾರದ ದಿನಾಂಕ:23.06.2018ರ** ಆದೇಶಾನುಸಾರ ಪರಿಗಣಿಸಿ ವಿಸ್ತರಿಸಿರುವ ತತ್ಪರಿಣಾಮವಾಗಿ, ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ29.08.2011ರನ್ವಯ ವಿಸ್ತರಿಸಲಾಗಿದ್ದ **ಇಡಿಗಂಟಿನ ಸೌಲಭ್ಯವನ್ನು ದಿನಾಂಕ:01.04.2018 ರಿಂದ ಅನ್ವಯವಾಗುವಂತೆ ಹಿಂಪಡೆಯಲಾಗಿದೆ.**

3. <u>ಕುಟುಂಬ ಪಿಂಚಣಿ:</u>

3.1 **ದಿನಾಂಕ:01.04.2018ರಂದು** ಅಥವಾ ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಕವಿಪ್ರನಿನಿ/ಎಲ್ಲಾ ವಿಸಕಂಗಳ ನೌಕರರ ಅವಲಂಬಿತರು ಆಯ್ಕೆ ಮಾಡಿಕೊಂಡಲ್ಲಿ, ಮೃತ ನೌಕರರ ಪಿಂಚಣಿ ನಿಧಿಯಲ್ಲಿ ಕ್ರೋಢೀಕೃತವಾದ ಮೊತ್ತವನ್ನು ನಿಗಮ/ವಿಸಕಂಗಳು ಹಿಂಪಡೆಯುವ ಷರತ್ತಿಗೊಳಪಟ್ಟು, ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಲಾಗಿದೆ.

3.2 ಈ ಉದ್ದೇಶಕ್ಕಾಗಿ ಮೃತ ಕವಿಪ್ರನಿನಿ/ವಿಸಕಂ ನೌಕರನ ಅವಲಂಬಿತರು ನೀಡುವ ಆಯ್ಕೆಯು ಐಚ್ಛಿಕವಾಗಿರುವುದಾಗಿದೆ. ಈ ಮೇರೆಗೆ ಒಮ್ಮೆ ಮೃತ ನೌಕರರ ಪಿಂಚಣಿ ನಿಧಿಯಲ್ಲಿನ ಮೊತ್ತವನ್ನು ನಿಗಮವು ಹಿಂಪಡೆಯುವ ಇಚ್ಛೆಯೊಂದಿಗೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಆಯ್ಕೆ ಮಾಡಿಕೊಂಡ ತರುವಾಯದಲ್ಲಿ ಮುಂದಿನ ದಿನಗಳಲ್ಲಿ ಸದರಿ ಆಯ್ಕೆಯನ್ನು ಪರಿಷ್ಕರಿಸಿ ಕುಟುಂಬ ಪಿಂಚಣಿ ಬದಲಿಗೆ ಪಿಂಚಣಿ ನಿಧಿಯಲ್ಲಿನ ಮೊತ್ತವನ್ನು ಪಾವತಿಸುವಂತೆ ಕೋರಿಕೆ ಸಲ್ಲಿಸುವ ಅಥವಾ ಪಿಂಚಣಿ ನಿಧಿಯಲ್ಲಿನ ಮೊತ್ತವನ್ನು ಪಡೆಯಲು ಇಚ್ಛಿಸಿ ಪಡೆದ ತರುವಾಯದಲ್ಲಿ ಮುಂದಿನ ದಿನಗಳಲ್ಲಿ ಸದರಿ ಸೌಲಭ್ಯದ ಬದಲಿಗೆ ನಿಗಮಕ್ಕೆ ಪಿಂಚಣಿ ನಿಧಿಯಿಂದ ಪಡೆದ ಮೊತ್ತವನ್ನು ಹಿಂಪಾವತಿಸುವ ಮೇರೆಗೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಕೋರುವಲ್ಲಿ ಅವಕಾಶಗಳಿಲ್ಲ ಮತ್ತು ಈ ಸಂಬಂಧ ಮಂಜೂರಾತಿ ಸಮಯದಲ್ಲಿ ನೀಡುವ ಆಯ್ಕೆಯೆ ಅಂತಿಮವಾಗಿದ್ದು, ಯಾವುದೇ ಸಂದರ್ಭ/ಕಾರಣಗಳಿಗಾಗಿ ಬದಲಾವಣೆಗೆ ಅವಕಾಶವಿರುವುದಿಲ್ಲ. ಸಂಬಂಧಪಟ್ಟ ನಿಯಮಗಳಿಗೆ ಪ್ರತ್ಯೇಕ ಸೂಕ್ತ ತಿದ್ದುಪಡಿಗಳನ್ನು ಹೊರಡಿಸಲಾಗುವುದು.

ಕರ್ನಾಟಕ ಸರ್ಕಾರವು ಮೇಲ್ಕಂಡ ಸವಲತ್ತುಗಳ ಪಾವತಿಗೆ ಸಂಬಂಧಿಸಿದಂತೆ ಹೊರಡಿಸಲಾಗುವ ಮಾರ್ಗಸೂಚಿಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲು ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುವುದು.

'ಆದೇಶದ ಮೇರೆಗೆ'

ನಿರ್ದೇಶಕರು(ಆ&ಮಾ.ಸಂ),
ಕವಿಪ್ರನಿನಿ

**ಪ್ರತಿಯನ್ನು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ನಿರ್ದೇಶಕರು(ಹಣಕಾಸು), ಬೆವಿಕಂ/ಹುವಿಸಕಂ
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಎಸ್ಕಾಂ
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
5. ಎಲ್ಲಾ ಮುಖ್ಯ ಇಂಜಿನಿಯರ್, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
6. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ), ಕವಿಪ್ರನಿನಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕಾವೇರಿ ಭವನ, ಬೆಂಗಳೂರು.
7. ಎಲ್ಲಾ ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ/ಎಸ್ಕಾಂಗಳು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https//kptcl.karnataka.gov.in>eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ /ಪಿಸಿಕೆಎಲ್
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿ, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
4. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳನ್ನು ಮಾಹಿತಿಗಾಗಿ:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (659) ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಮಂ ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.